'ಓಗ್ತಿನಿ ಕಣವ್ವ. ಇನ್ನಾರು ಓಗ್ತಾರೆ ಮತ್ತೆ?

ಝೀನತ್ ಮೇಲೆದ್ದು ಕಾಲೆಳೆಯುತ್ತಾ ಅಂಗಳಕ್ಕೆ ಹೋಗಿ, ಕೈಕಾಲು ತೊಳೆದುಕೊಂಡು ವಝು ಮಾಡಿದಳು. ಆಮೇಲೆ ನಮಾಜು ಮಾಡಿ, ಹಂಗೇ ಕೂತು ಕೈ ಬೆರಳೆಣಿಸಿ, ಅಲ್ಲಾನ ಪ್ರಾರ್ಥನೆ ಮಾಡಿದಳು. ನೈಮಾ ಹಿಂದೆ ನಿಂತಿದ್ದಾಳೆ ಅನ್ನಿಸಿ ತಿರುಗಿ ನೋಡಿದಳು:

'ಯಾಕೆ ನಿಂತಿದೀಯವ್ವ? ಹೋಗಿ ಟೀ ಮಾಡುದ್ರಾಗಲ್ವಾ?'

ಝೀನತ್ ಮೇಲೆದ್ದು, ಗಂಡ ಫೊಬಾಶಿ ಚೀಲಗಳಲ್ಲಿ ಮುಸುಕಿನ ಜೋಳ ಒಟ್ಟಿದ್ದ ಮೂಲೆಯ ಕಡೆಗೆ ನಡೆದಳು. ಲಿಬಿಯಾದಲ್ಲಿ ಕೆಲಸ ಸಿಕ್ಕಿದ ಮೇಲೆ, ಈ ಊರಿನ ಆಫೀಸಿನವರು ಕೊಡಿಸಿದ್ದ ವಿಮಾನದ ಟಿಕೇಟು ತೆಗೆದುಕೊಂಡು ಹೊರಡುವ ಮೊದಲು ಫೊಬಾಶಿ ಮನೆಯ ಮೂಲೆಯಲ್ಲಿ ಮುಂದಿನ ಒಂದು ವರ್ಷಕ್ಕೆ ಆಗುವಷ್ಟು ಮುಸುಕಿನ ಜೋಳ ಒಟ್ಟಿ ಹೋಗಿದ್ದ.

'ನೀನು ಅಲ್ಲಿರುವಾಗ ದೇವರು ನಿನ್ನ ಚೆನ್ನಾಗಿಟ್ಟಿರಲಿ ಫೊಬಾಷಿ' ಎಂದು ಗೊಣಗಿಕೊಂಡಳು ಝೀನತ್.

ಮೂಲೆಯಲ್ಲಿದ್ದ ಚೀಲದೆದುರು ಕೂತು ತೊಡೆ ನಡುವೆ ಸೇರನ್ನಿಟ್ಟುಕೊಂಡ ಝೀನತ್ ಬೊಗಸೆಯಲ್ಲಿ ಮುಸುಕಿನ ಜೋಳ ಎತ್ತಿ ಎತ್ತಿ ಸೇರಿಗೆ ಹಾಕಿ, ಅದು ತುಂಬಿದಂತೆಲ್ಲಾ ಬುಟ್ಟಿಯೊಳಕ್ಕೆ ಸುರಿಯುತ್ತಾ ಹೋದಳು. ಕೆಮ್ಮುತ್ತಾ, ಮುಖಕ್ಕೆ ರಾಚಿದ ದೂಳನ್ನು ಕೈಯಿಂದ ಜಾಡಿಸುತ್ತಾ, ಜೋಳ ಅಳೆಯುತ್ತಲೇ ಇದ್ದಳು.

ಮಗಳು ಗುಡಾಣದ ಮರದ ಮುಚ್ಚಳ ತೆಗೆದು ಚೆಂಬಿನಿಂದ ನೀರು ಮೊಗೆದು ಮುಖಕ್ಕೆ ನೀರೆರಚಿಕೊಂಡಳು. ಬೆರಳು ಒದ್ದೆ ಮಾಡಿಕೊಂಡು ಬೈತಲೆ ನೇವರಿಸಿಕೊಂಡು ತಲೆಗೆ ಕರ್ಚೀಫ್ ಕಟ್ಟಿಕೊಂಡು ಅವ್ವನ ಕಡೆ ತಿರುಗಿದಳು:

'ಸಾಕು ಬಿಡವ್ವಾ. ಈಗ ನಮಿಗೆ ದುಡ್ಡ್ಯಾಕೆ ಬೇಕು?'

ಝೀನತ್ ತೊಡೆ ಮೇಲೆ ಕೈ ಬಡಿಯುತ್ತಾ ಕತ್ತೆತ್ತಿದಳು.

'ಹಮ್ದನ್‌ಗೆ ಕೂಲಿ ಕೊಡೋದು ಬೇಡ್ವಾ? ಅವನೇನು ಸುಮ್ಮಸುಮ್ಮನೆ ಹುರುಳೀ ಬೆಳೆದು ಕೊಟ್ಟವನೇನು? ಸುಮ್ಮನೆ ಮೈ ಮುರಿದು ದುಡಿದರೆ ಮಜವಾಗಿರುತ್ತೆ ಅಂತ ಕೆಲಸ ಮಾಡಿದಾನೇನು?'

ನೈಮಾ ಕಿಟಕಿಯ ಬಳಿಯ ಗೂಡಿನಿಂದ ಒಲೆ ತಂದು ಅವ್ವನ ಪಕ್ಕದಲ್ಲಿಟ್ಟು, ಅದರೊಳಕ್ಕೆ ಮುಸುಕಿನ ಜೋಳದ ತೆನೆಯ ಒಣ ದಿಂಡು ಒಟ್ಟಿ ಒಲೆ ಹೊತ್ತಿಸಿದಳು. ಟೀ ಪಾತ್ರೆಗೆ ಹೂಜಿಯಿಂದ ನೀರು ಹೊಯ್ದು ಕೆಂಡದ ಮೇಲಿಟ್ಟು ಅಲ್ಲೇ ಕೂತಳು. ಇಬ್ಬರೂ ಸುಮ್ಮನೆ ಕೂತಿದ್ದರು. ಥಟ್ಟಂತ ಝೀನತ್ ಮಗಳನ್ನು ಕೇಳಿದಳು:

'ಆ ಕ್ವಾಣ ಎಷ್ಟು ದಿನದಿಂದ ಈ ಮಗೂ ತಾವ ಬತ್ತಾ ಐತೋ?'

'ಅಪ್ಪ ಊರಿಗೆ ಹೋದ ಮೇಲೆ.'

'ಅಂದರೆ, ದೊಡ್ಡ ಹಬ್ಬ ಆದ ಮೇಲೆ, ಅಲ್ಲವಾ ಮಗಳೆ?'

ನೈಮಾ 'ಹೂಂ' ಎನ್ನುವಂತೆ ಕತ್ತು ಹಾಕಿ, ಆಮೇಲೆ ಕತ್ತು ತಗ್ಗಿಸಿ ಸುಮ್ಮನೆ ದೂಳಿನಲ್ಲಿ ಗೆರೆ ಎಳೆಯಲು ಶುರು ಮಾಡಿದಳು.

'ಟೀ ಸೊಪ್ಪು ಕುದಿಯೋ ಹೊತ್ತಿಗೆ ಆ ಕಡೆ ಹೋಗಿ ಕೋಳಿ ಎಷ್ಟು ಮೊಟ್ಟೆ ಇಟ್ಟಿದಾವೆ ನೋಡು.'

ಝೀನತ್ ಉರಿವ ಸೌದೆಯನ್ನೇ ದಿಟ್ಟಿಸಿದಳು. ಕುಣಿಯುತ್ತಿದ್ದ ಉರಿಯ ನಾಲಗೆಯನ್ನು